*C.C.*
*18426/2024*
*P W-1*

**ಸಾಕ್ಷಿಯನ್ನು ದಿನಾಂಕ 08.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಚಾರಗಳು ಗೊತ್ತು ಮತ್ತು ಸದರಿ ಪ್ರಮಾಣ ಪತ್ರವನ್ನು ತಯಾರು ಮಾಡಲು ನಮ್ಮ ವಕೀಲರೇ ಮಾಹಿತಿ ಕೊಟ್ಟರು. ನಾನು 8ನೇ ತರಗತಿ ಓದಿದ್ದೇನೆ. ನನಗೆ ಕನ್ನಡ ಓದಲು ಸ್ವಲ್ಪ ಸ್ವಲ್ಪ ಬರುತ್ತದೆ. ಇಂಗ್ಲೀಷ್ ಬರುವುದಿಲ್ಲ. ನಾನು ಆಟೋ ಮತ್ತು ಟಿಟಿ ವೆಹಿಕಲ್ ಅನ್ನು ಇಟ್ಟುಕೊಂಡು ಅವುಗಳನ್ನು ಓಡಿಸುತ್ತೇನೆ ಮತ್ತು ಊರಿನಲ್ಲಿ ವ್ಯವಸಾಯವನ್ನು ಮಾಡುತ್ತೇನೆ. ಎರಡು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತೇನೆ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದೆ, ನನ್ನ ಹೆಸರಿನಲ್ಲಿ ಸ್ವಲ್ಪ ಇದೆ. ಸದರಿ ಜಮೀನಿನ ಸರ್ವೇ ನಂ.13/14 ಆಗಿರುತ್ತದೆ. ಅದರ ವಿಸ್ತೀರ್ಣ 7ಗುಂಟೆ ಇರಬಹುದು. ನನ್ನ ಹೆಸರಿನಲ್ಲಿ ಇರುವಂತಹ ಜಮೀನಿನ ಸರ್ವೇ ನಂಬರ್ ಗೊತ್ತಿಲ್ಲ.

2. ನಾನು ಈಗ ವಾಸವಾಗಿರುವಂತಹ ಮನೆ ಬಾಡಿಗೆಗೆ ಎಂದರೆ ಸರಿಯಲ್ಲ, ಲೀಸ್ ಗೆ ಇದ್ದೇನೆ. ಮೂರು ಲಕ್ಷಕ್ಕೆ ಲೀಸ್ ಗೆ ಹಾಕಿಕೊಂಡಿದ್ದೇನೆ. ನನ್ನ ತಿಂಗಳ ವರಮಾನ ರೂ.40,000/- ರಿಂದ ರೂ.50,000/-. ನನ್ನ ವಾರ್ಷಿಕ ವರಮಾನ ಅಷ್ಟು ಅಂದಾಜು ಆಗಿ ಹೇಳಲು ಆಗುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

3. ನನಗೆ ಆರೋಪಿ 7-8ವರ್ಷಗಳಿಂದ ಪರಿಚಯ. ಆರೋಪಿಯು ಟೈಲರಿಂಗ್ ಕೆಲಸ ಮಾಡುತ್ತಾರೆ. ಆರೋಪಿಯು ಆರ್ಥಿಕವಾಗಿ ಮನೆಯ ಕಡೆ ಚೆನ್ನಾಗಿ ಇದ್ದಾರೆ ಎಂದರೆ ಹೌದು. 2023ರ 6 ಅಥವಾ 7ನೇ ತಿಂಗಳಲ್ಲಿ ಆರೋಪಿ ನನ್ನನ್ನು ಹಣ ಕೇಳಿರಬಹುದು. ಯಾವ ವರ್ಷಗಳಲ್ಲಿ ಹಣ ಕೊಟ್ಟಿದ್ದೇನೆ ಎಂದು ನೆನಪಿಲ್ಲ, 2023ರಲ್ಲಿ ಕೊಟ್ಟಿರಬಹುದು. ದಿನಾಂಕ ಮತ್ತು ತಿಂಗಳು ನಿಖರವಾಗಿ ನೆನಪಿಲ್ಲ. ಹಣವನ್ನು ಆರೋಪಿಗೆ ನಮ್ಮ ಮನೆಯ ಬಳಿ ಕೊಟ್ಟೆ. ನಾನು ಆರೋಪಿಗೆ ಒಟ್ಟು ಹತ್ತು ಲಕ್ಷ ಕೊಟ್ಟೆ. ಆರೋಪಿಗೆ ಹಣ ಕೊಟ್ಟಾಗ ಯಾರೂ ಇರಲಿಲ್ಲ, ಹಣವನ್ನು ಮನೆಯ ಒಳಗೆ ಕೊಟ್ಟಿಲ್ಲ, ಹೊರಗೆ ಕೊಟ್ಟೆ. ಹತ್ತು ಲಕ್ಷ ಹಣವನ್ನು ಕೊಟ್ಟೆ. ಆಗಾಗ ಫೋನ್ ಪೇ ಮಾಡಿರುತ್ತೇನೆ. ಒಂದೇ ದಿನ ತಲಾ ರೂ.40,000/- ದಂತೆ ಎರಡು ಬಾರಿ ಹಾಕಿದೆ. ಒಂದು ಸಾರಿ ರೂ.44,000/-, ಒಂದು ಸಾರಿ 60,000/- ಮತ್ತು ಒಂದು ಸಾರಿ ರೂ.10,000/- ಫೋನ್ ಪೇ ಮಾಡಿರುತ್ತೇನೆ. ಇನ್ನುಳಿದ ಮೊತ್ತವನ್ನು ಆಗಾಗ ನಗದು ರೂಪದಲ್ಲಿ ಕೊಟ್ಟೆ. ಸದರಿ ದಿನಾಂಕಗಳು ನೆನಪಿಲ್ಲ. ಫೋನ್ ಪೇ ಮುಖಾಂತರ ರೂ.1,90,000/- ವರೆಗೂ ಕೊಟ್ಟಿದ್ದೇನೆ.

4. ಮನೆಯ ಹೊರಗೆ ಹಣವನ್ನು ಕೊಟ್ಟಾಗ ಯಾರೂ ಇರಲಿಲ್ಲ. ಆಗಾಗ ನಮ್ಮ ಮನೆಯ ಬಳಿ, ಆರೋಪಿ ಮನೆಯ ಬಳಿ, ರಸ್ತೆಯಲ್ಲಿ ಹಣ ಕೊಟ್ಟಿದ್ದೇನೆ. ಯಾವ ಸಂದರ್ಭದಲ್ಲೂ ಹಣ ಕೊಡುವಾಗ ಯಾರೂ ಇರಲಿಲ್ಲ. ರೂ.20,000/- ಮೇಲ್ಪಟ್ಟು ವ್ಯವಹಾರ ಮಾಡಬೇಕಾದರೆ ಬ್ಯಾಂಕ್ ಮುಖಾಂತರ ಮಾಡಬೇಕು ಎಂದರೆ ಅದು ನನಗೆ ಗೊತ್ತಿಲ್ಲ. ಹಣವನ್ನು ಕೊಟ್ಟ ನಂತರ ನನ್ನ ಮತ್ತು

ಆರೋಪಿಯ ನಡುವೆ ಯಾವುದೇ ಮಾತುಕತೆ ಆಗಿಲ್ಲ. ಹಣವನ್ನು ಕೊಟ್ಟಾಗ ಯಾವುದೇ ಮಾತುಕತೆ ಆಗಿಲ್ಲವಾ ಎಂಬ ಪ್ರಶ್ನೆಗೆ ನಾವಿಬ್ಬರು ಅಣ್ಣ ತಂಗಿ ಆಗಿದ್ದೆವು, ನಾನು ಕೊಡುತ್ತಿದ್ದೆ, ಅವರು ಕೊಡುತ್ತಿದ್ದರು, ನಗದು ಮತ್ತು ಫೋನ್ ಪೇ ಮುಖಾಂತರ ಒಬ್ಬರಿಗೊಬ್ಬರು ಕೊಡುವುದು ಮತ್ತು ತೆಗೆದುಕೊಳ್ಳುವುದು ಮಾಡುತ್ತಿದ್ದೆವು. ಎಲ್ಲಾ ಬಿಟ್ಟು ನನಗೆ ಇನ್ನು ಇಷ್ಟು ಹಣ ಕೊಡಬೇಕು, ಫೋನ್ ಪೇ ಮುಖಾಂತರ ಆರೋಪಿ ಎಷ್ಟು ಕೊಟ್ಟಿದ್ದಾರೆ, ನಗದು ರೂಪದಲ್ಲಿ ಎಷ್ಟು ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ.

5. ದಿನಾಂಕ:23.07.2024ರಂದು ಆರೋಪಿ ನನಗೆ ಚೆಕ್ ಕೊಟ್ಟರು. ಆರೋಪಿಯು ನನ್ನ ಖಾತೆಯಲ್ಲಿ ಹಣ ಇದೆ, ಡ್ರಾ ಮಾಡಿಕೊಳ್ಳಿ ಎಂದು ಚೆಕ್ ಕೊಟ್ಟರು. ಚೆಕ್ ಕೆನರಾ ಬ್ಯಾಂಕ್ ಇರಬಹುದು ಅಷ್ಟು ನೆನಪಿಲ್ಲ ಯಾವ ಶಾಖೆ ಎಂದು ನೆನಪಿಲ್ಲ. ಚೆಕ್ ನಂಬರ್ ನೆನಪಿಲ್ಲ. ಚೆಕ್ ಬಿಟ್ಟು ಆರೋಪಿಯು ಬೇರೆ ದಾಖಲೆಗಳನ್ನು ಕೊಟ್ಟಿದ್ದಾರೆ. ಪ್ರಾಮಿಸರಿ ನೋಟ್ ಮತ್ತು ಅನ್ ಡಿಮಾಂಡ್ ನೋಟನ್ನು ಕೊಟ್ಟಿದ್ದಾರೆ. ಪ್ರಾಮಿಸರಿ ನೋಟ್ ಮತ್ತು ಅನ್ ಡಿಮಾಂಡ್ ನೋಟನ್ನು ದಿನಾಂಕ:05.03.2024ರಂದು ಕೊಟ್ಟರು. ಪ್ರಾಮಿಸರಿ ನೋಟ್ ಮತ್ತು ಅನ್ ಡಿಮಾಂಡ್ ನೋಟ್ ಗಳಲ್ಲಿ ಯಾರು ಸಾಕ್ಷಿದಾರರು ಎಂದು ಗೊತ್ತಿಲ್ಲ, ಆರೋಪಿಯೇ ಸಹಿಗಳನ್ನು ಮಾಡಿಸಿಕೊಂಡು ತಂದು ಕೊಟ್ಟಿರುತ್ತಾರೆ. ಅವರ ಕಡೆಯವರು ಇಲ್ಲವೋ ಗೊತ್ತಿಲ್ಲ. ಸಾಕ್ಷಿದಾರರು ಯಾರು ಎಂದು ಗೊತ್ತಿಲ್ಲ. ನಿ.ಪಿ.6 ಮತ್ತು 7 ಅನ್ನು ಆರೋಪಿ ನನಗೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,
ಬೆಂಗಳೂರು.**

*C.C.*
*18426/2024*
*P W-1*